MYSORE LEGISLATIVE ASSEMBLY

Thursday, 19th September 1968

The House met in the Assembly Chamber, Vidhana Soudha, Bangalore-1, at Twelve of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Central Land Development Bank

231. **Sri S. S. ARAKERI** (Ballolli).—

Will the Minister for Development be pleased to state :—

(*a*) the total No. of employees in Central Land Development Bank in various cadres in the State;

(*b*) the total No. of Scheduled Caste and Scheduled Tribes employees in the above Bank;

(*c*) whether 18 per cent of the posts in the said Bank have been filled up by the Scheduled Caste and Scheduled Tribes, if not, the reasons for the same ?

A.—**Sri B. L. GOWDA** (Deputy Minister for Co-operation).—

(*a*) 213 (as per list appended).

(*b*) 13.

(*c*) No.

For want of qualified applicants.

(SRI B. L. GOWDA)

LIST

Showing the No. of employees of the Mysore State Land Development Bank in different cadres and the No. of employees belonging to Scheduled Castes and Scheduled Tribes

Sl. No.	Cadre		No. of employees working	No. of Scheduled Castes and Scheduled Tribes
1	Special Officers	...	4	...
2	Assistant Secretaries	...	7	...
3	Chief Accountant	...	1	...
4	Legal Assistants	...	20	1
5	Accountants	...	8	...
6	Assistant Accountants	...	6	...
7	Superintendents	...	16	...
8	Clerks	...	95	7
9	Peons	...	36	5
10	Pool Officers	...	20	...
		Total ...	213	13

ಶ್ರೀ ಎಸ್. ಎಸ್. ಅರಕೇರಿ.—ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ 213 ನೌಕರರಿದ್ದಾರೆ, ಅದರಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿ ನೌಕರರು 13 ಜನರಿದ್ದಾರೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಬ್ಯಾಂಕಿನಲ್ಲಿರುವ ಹುದ್ದೆಗಳ ಪೈಕಿ ಸೇಕಡ 18ರಷ್ಟು ಹುದ್ದೆಗಳನ್ನು ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗಳವರಿಗೆ ಕೊಡದಿರಲು ಕಾರಣ ಅರ್ಹತೆಯುಳ್ಳ ಅಭ್ಯರ್ಥಿಗಳು ಇಲ್ಲದಿರುವುದು ಎಂದು ಹೇಳಿದೆ. ಬಿ. ಎ. ಮತ್ತು ಎಂ. ಎ. ಪಾಸು ಮಾಡಿದವರು ಬೇಡಿಗಳಲ್ಲಿ ಕೆಲಸವಿಲ್ಲದೆ ಅಲೆಯುತ್ತಿರುವಾಗ ಅರ್ಹತೆ ಇರುವವರಿಲ್ಲವೆಂದರೆ ಇನ್ನೇನು ಅರ್ಹತೆ ಇರಬೇಕು ?

† ಶ್ರೀ ಬಿ. ಎಲ್. ಗೌಡ.—ಉದ್ಯೋಗಗಳಿಗೆ ಅರ್ಜಿಗಳನ್ನು ಕರೆದಾಗ, ಇಂಟರ್‌ವ್ಯೂ ಮಾಡುವಾಗ ಅರ್ಹತೆ ಇರುವವರು ಬಂದಿರಲಿಲ್ಲ

ಶ್ರೀ ಎಸ್. ಎಸ್. ಅರಕೇರಿ.—ನಿರುದ್ಯೋಗಿಗಳಾಗಿರುವ ಜನರಿಗಾಗಿ ಎಂಪ್ಲಾಯಮೆಂಟ್ ಬ್ಯೂರೋ ಮಾಡಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್ ಜನರಿಗೆ 18 ಪರ್ಸೆಂಟ್ ಹುದ್ದೆಗಳು ಸಿಗಲಾರದ್ದರಿಂದ ಅಲ್ಲಿಂದ ಹೆಸರುಗಳನ್ನು ತರಿಸಿಕೊಂಡು ಏಕೆ ನೇಮಕ ಮಾಡಬಾರದು ?

ಶ್ರೀ ಬಿ. ಎಲ್. ಗೌಡ.—ಅರ್ಜಿ ಹಾಕಿದ್ದವರಲ್ಲಿ ಸರಿಯಾದ ವಿದ್ಯಾರ್ಹತೆ ಇರಲಿಲ್ಲವಾದ್ದರಿಂದ ತೆಗೆದುಕೊಳ್ಳಲು ಆಗಿಲ್ಲ ಎಂದು ಈಗಾಗಲೇ ಹೇಳಿದೆ.

ಶ್ರೀ ಎಸ್. ಎಸ್. ಅರಕೇರಿ.—ಯಾವ ಯಾವ ಕೆಲಸಕ್ಕೆ ಏನು ಕ್ವಾಲಿಫಿಕೇಷನ್ ಇರಬೇಕು ಎಂದು ತಿಳಿಸಬಹುದೇ ?

ಶ್ರೀ ಬಿ. ಎಲ್. ಗೌಡ.—ಬೇರೆ ಬೇರೆ ಕೆಲಸಕ್ಕೆ ಬೇರೆ ಬೇರೆ ವಿದ್ಯಾರ್ಹತೆ ಇದೆ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರಗಳನ್ನು ಕೊಡಬಹುದು.

†Indicates that the speeches or remarks have not been revised by the member concerned.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ರಾಜ್ಯಾಂಗ ಬದ್ಧವಾಗಿರುವ ಒಂದು ಹಕ್ಕಿಗೆ ಧಕ್ಕೆ ತಂದಿದ್ದಾರೆ. ಏನೆಂದರೆ ಪ್ರತಿ ಯೂನಿಟ್‌ನಲ್ಲಿಯೂ ರಾಜ್ಯದ ಸರ್ಕಾರಿ ಹುದ್ದೆಗಳಲ್ಲಿ ನೂರಕ್ಕೆ 18 ಭಾಗ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ ನವರನ್ನು ನೇಮಕ ಮಾಡ ಬೇಕು ಎಂದು ಇವೆ. ಆ ಪ್ರಕಾರ ಕ್ಲಾಸಿಫಿಕೇಷನ್ ಮಾಡಿ ಅರ್ಜಿಗಳನ್ನು ಕರೆದಿದ್ದೀರಾ ಸ್ವಾಮಿ

ಶ್ರೀ ಬಿ. ಎಲ್. ಗೌಡ.—ರಾಜ್ಯಾಂಗದತ್ತವಾದ ಹಕ್ಕನ್ನು ನಿರಾಕರಣೆಮಾಡಿಲ್ಲ. ನಿಯಮ ಗಳ ಪ್ರಕಾರ 18 ಪರ್ಸೆಂಟ್ ಸ್ಥಾನಗಳನ್ನು ನಿಮ್ನವರ್ಗದವರಿಗೆ ಕೊಡಬೇಕು ಎಂದು ಸೂಚನೆ ಯನ್ನು ಕೊಟ್ಟಿದ್ದೇವೆ. ಅರ್ಹತೆಯ ಪ್ರಕಾರ ಅರ್ಜಿಗಳು ಬರಲಿಲ್ಲವಾದ್ದರಿಂದ ಅವರಿಗೆ ಕೆಲಸ ಗಳನ್ನು ಕೊಡಲು ಆಗಿಲ್ಲ. ಮುಂದೆ ಬಂದರೆ ಕೊಡುತ್ತೇವೆಂದು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ನೂರಕ್ಕೆ 18 ಸ್ಥಾನ ಗಳನ್ನು ನಿಮ್ನವರ್ಗದವರಿಗೆ ಕೊಡಬೇಕೆಂದು ರಾಜ್ಯಾಂಗದ ಪ್ರಕಾರ ಸಹಕಾರ ಸಂಸ್ಥೆಗಳ ಮೇಲೆ ಒತ್ತಾಯಮಾಡಿದೆಯೇ?

ಶ್ರೀ ಬಿ. ಎಲ್. ಗೌಡ.—ಇದೆ. ಅದರಂತೆ ಸಹಕಾರ ಸಂಸ್ಥೆಗಳಿಗೆ ಸೂಚನೆ ಕೊಟ್ಟಿದ್ದೇವೆ.

ಶ್ರೀ ಐ. ಸೋಮಶೇಖರಪ್ಪ.—ಮಾನ್ಯ ಮಂತ್ರಿಗಳು ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿ ದರು. ನಿಮ್ನ ವರ್ಗದವರಿಗೆ 18 ಪರ್ಸೆಂಟ್ ಸ್ಥಾನಗಳನ್ನು ಕೊಟ್ಟೇ ತೀರಬೇಕು ಎಂದು ಕಡ್ಡಾಯವಾಗಿ ಆದೇಶವೇನಾದರೂ ಸರ್ಕಾರ ಕೊಟ್ಟಿದೆಯೇ ಅಥವಾ ಬರೀ ಸೂಚನೆ ಕೊಟ್ಟಿದೆಯೇ?

ಶ್ರೀ ಬಿ. ಎಲ್. ಗೌಡ.—ಆದೇಶವನ್ನು ಕೊಟ್ಟಿದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸಾಕಾದಷ್ಟು ಅರ್ಜಿಗಳು ಬಾರದೆ ಇದ್ದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಿಂದ ಬಂದಿರತಕ್ಕ ಅರ್ಜಿಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಸಂಬಂಧಪಟ್ಟ ಅರ್ಜಿಗಳನ್ನು ತರಿಸಿಕೊಂಡು ಸ್ಥಳಗಳನ್ನು ಭರ್ತಿ ಮಾಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಬಿ. ಎಲ್. ಗೌಡ.—ಅಲ್ಲಿಂದ ತರಿಸಿಕೊಂಡು ಹಂಗಾಮಿಯಾಗಿ ನೇಮಕಗಳನ್ನು ಮಾಡುತ್ತೇವೆ. ಖಾಯಂ ನೇಮಕಗಳಿಗೆ ಪತ್ರಿಕೆಗಳಲ್ಲಿ ಪ್ರಕಟಮಾಡಿ ಅರ್ಜಿಗಳನ್ನು ಕರೆದು ಭರ್ತಿ ಮಾಡುತ್ತೇವೆ.

ಶ್ರೀ ಕೆ. ಪ್ರಭಾಕರ.—ಬೇರೆ ಬೇರೆ ಹುದ್ದೆಗಳಿಗೆ ಏನೇನು ಅರ್ಹತೆಗಳು ಇರಬೇಕು. ಅರ್ಜಿ ಹಾಕಿದ್ದವರಿಗೆ ಆ ಅರ್ಹತೆ ಇಲ್ಲದೆ ಇದ್ದರೆ ಅವರಿಗೆ ಇದ್ದ ಅರ್ಹತೆಗಳು ಏನು ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಬಿ. ಎಲ್. ಗೌಡ.—ಆ ವಿವರಗಳು ನನ್ನ ಹತ್ತಿರ ಇಲ್ಲ.

Sri J. P. SARWESH.—Sir, in spite of the proud claims of our Government for the last 20 years of giving educational facilities do you mean to say that Government has failed to produce qualified hands ?

Sri B. L. GOWDA.—Sufficient opportunity has been given to al the persons to come up.

Opening of Research Centre

232. **Sri RATANKUMAR KATTEMAR** (Mudabidri).—

Will the Minister for Education be pleased to state:—

whether there is any proposal before the Government for opening of Research Centre for conduct.ng Research work of ancient Sanskrit Manuscripts which are available at the Jain temples and the muth at Moodbidri ?